# ಅದ್ವೆ ಅಧ್ಯಾಯ

**ಸಿನಿಮಾ ಕುಟುಂಬದ ಕುಡಿಯಾಗಿ, ಅಪ್ಪ, ದೊಡ್ಡಪ್ಪನ ನಟನೆಯ ನೆರಳಲ್ಲೇ ಬೆಳೆದಿರುವ ನಟ ಅದ್ವೆ ಅವರಿಗೆ ಆ ಪ್ರಭಾವಳಿಗಳಾಚೆಗೆ ಸಿನಿಮಾರಂಗದಲ್ಲಿ ತಮ್ಮದೇ ಹೊಸ ಪಥ ರೂಪಿಸಿಕೊಳ್ಳಬೇಕೆಂಬ ಮಹದಾಸೆ. ತಮ್ಮ ತಂದೆ ರವಿಶಂಕರ್ ನಿರ್ದೇಶಿಸುತ್ತಿರುವ 'ಸುಬ್ರಹ್ಮಣ್ಯ' ಸಿನಿಮಾ ಮೂಲಕ ಚಂದನವನದಲ್ಲಿ ಅವರೀಗ ಮೊದಲ ಅಧ್ಯಾಯ ಆರಂಭಿಸಿದ್ದಾರೆ.**

**■ ಸುಮಲತಾ ಎನ್**



“ಚಿಕ್ಕವಯಸ್ಸಿನಿಂದ 'ಸಿನಿಮಾ' ನಡುವೆಯೇ ಬೆಳೆದವನು ನಾನು. ಅಪ್ಪ, ದೊಡ್ಡಪ್ಪ, ತಾತ, ಚಿಕ್ಕಪ್ಪ ಎಲ್ಲರೂ ಸಿನಿಮಾದವರೇ. ಮನೆಯಲ್ಲಿ ಯಾವಾಗಲೂ ಚರ್ಚೆಯಾಗುತ್ತಿದ್ದ ವಿಷಯವೂ ಸಿನಿಮಾ ಮಾತ್ರ. ಹೀಗಿದ್ದಾಗ ಆ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ನಟನ ಮಗ ನಟನೇ ಆಗಬೇಕಾ ಎಂದು ಹಲವರು ಕೇಳುತ್ತಾರೆ. ಹಾಗೇನೂ ಇಲ್ಲ, ಆದರೆ ಆ ಪ್ರಭಾವ ಮಾತ್ರ ಇದ್ದೇ ಇರುತ್ತದೆ...”

ನಟನೆ, ಡಬ್ಬಿಂಗ್, ನಿರ್ದೇಶನ... ಹೀಗೆ ಬಹುರಂಗಗಳಲ್ಲಿ ಹೆಸರಾಗಿರುವ ನಟ ರವಿಶಂಕರ್ ಅವರ ಪುತ್ರ ಅದ್ವೆ, ತಮ್ಮ ನಟನೆಯ ಮೂಲದ ಬಗ್ಗೆ ನೀಡಿದ ವಿವರಣೆಯಿದು.

ಅಪ್ಪನ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಸುಬ್ರಹ್ಮಣ್ಯ' ಸಿನಿಮಾ ಮೂಲಕವೇ ತಾವು ಕನ್ನಡ ಸಿನಿಮಾರಂಗಕ್ಕೆ ಪರಿಚಿತಗೊಳ್ಳುತ್ತಿರುವ ಕುರಿತು ಸಂತೋಷ, ಉತ್ಸಾಹ ತುಂಬಿಕೊಂಡಿರುವ ಅವರಲ್ಲಿ ತಮ್ಮದೇ ಒಂದು ಹೊಸ ದಾರಿ ನಿರ್ಮಿಸಿಕೊಳ್ಳುವ ಗುರಿ.

“ಚಿಕ್ಕ ವಯಸ್ಸಿನಲ್ಲಿ ನನಗೆ ಸ್ಟೋರಿ ಟೆಲ್ಲಿಂಗ್ ಅಂದರೆ ತುಂಬಾ ಇಷ್ಟ ಇತ್ತು. 7ನೇ ತರಗತಿಯಲ್ಲಿದ್ದಾಗ ನಿರ್ದೇಶಕನಾಗಬೇಕೆಂಬ ಆಸೆ ಶುರುವಾಗಿತ್ತು. ಕಾಲೇಜು ದಿನಗಳಲ್ಲಿ ಕೆಲವು ಕಿರುಚಿತ್ರಗಳಿಗೆ ನಾನೇ ನಿರ್ದೇಶನ ಮಾಡಿದ್ದೆ ಕೂಡ. ಕೆಲವೊಮ್ಮೆ ಅಪ್ಪನ ಸ್ನೇಹಿತರು ನನ್ನನ್ನು ನೋಡಿ, 'ನಟ ಆಗುತ್ತೀಯಾ' ಅಂತ ಕೇಳುತ್ತಿದ್ದರು. ಗಂಭೀರವಾಗಿ ನಾನು ಆ ಪ್ರಶ್ನೆಯನ್ನು ತೆಗೆದುಕೊಂಡವನೇ ಅಲ್ಲ. ಆದರೆ ಅಪ್ಪ ಒಮ್ಮೆ ನನ್ನನ್ನು ಕೇಳಿದರು. ಆಗ ನಾನು ಹೇಳಿದ ಮಾತು ಒಂದೇ. 'ನಿಮ್ಮ ಮಗ ಎಂಬ ಕಾರಣಕ್ಕೆ ಸುಮ್ಮನೆ ಸಿನಿಮಾರಂಗಕ್ಕೆ ಕಾಲಿಡುವುದು ಸೂಕ್ತವಲ್ಲ. ನನ್ನೊಳಗೆ ನಟಿಸುವ ಸಾಮರ್ಥ್ಯ, ಪ್ರತಿಭೆ ಇದ್ದರೆ ಮಾತ್ರ ಅದಕ್ಕೊಂದು ಬೆಲೆ' ಎಂದು” ಮೆಲುಕು ಹಾಕಿದರು ಅದ್ವೆ.

ನಟನೆಯನ್ನೇ ಗಂಭೀರವಾಗಿ ಪರಿಗಣಿಸಿ ನ್ಯೂಯಾರ್ಕ್‌ನಲ್ಲಿನ ನಟನಾ ಶಾಲೆಯಲ್ಲಿ ಎರಡು ವರ್ಷ ಕೋರ್ಸ್ ಮಾಡಿದರು. ಅಲ್ಲಿ ಇಂಗ್ಲಿಷ್ ನಾಟಕವೊಂದರಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಅದ್ವೆ ಅವರ ನಟನೆಗೆ ಅತ್ಯುತ್ತಮ ಪ್ರತಿಕ್ರಿಯೆ ದೊರೆತದ್ದು ಅವರಲ್ಲಿನ ಹುಮ್ಮಸ್ಸನ್ನು ಇನ್ನಷ್ಟು ಹೆಚ್ಚಿಸಿತ್ತು. ಅವಕಾಶಗಳೂ ಅರಸಿ ಬಂದವು. ಆದರೆ ತಮ್ಮದೇ ನಿರ್ದೇಶನದಲ್ಲಿ ಮಗನನ್ನು ಸಿನಿಮಾರಂಗಕ್ಕೆ ಪರಿಚಯಿಸಬೇಕೆಂಬ ಅಪ್ಪನ ಕನಸನ್ನು ಪೂರೈಸಲು ಮರಳಿದರು.

ತಮ್ಮ ಸಿನಿಮಾ ಬದುಕಿಗೆ ಅಪ್ಪನ ಅನುಭವಗಳು, ನಾಟಕ ಶಾಲೆಯ ಪಾಠಗಳನ್ನು ಅಡಿಪಾಯ ಮಾಡಿಕೊಂಡಿರುವ ಇವರಿಗೆ ಪ್ರತಿದಿನವೂ ಅಪ್ಪನಿಂದ ಕಲಿಕೆ ಇದ್ದೇ ಇರುತ್ತದೆ. 'ಅಪ್ಪನದು ಐವತ್ತು ವರ್ಷಗಳ ಅನುಭವ. ಅವರಿಂದ ಪ್ರತಿದಿನ ಹೊಸ ಪಾಠಗಳನ್ನು ಕಲಿಯುತ್ತಿದ್ದೇನೆ' ಎನ್ನುವ ಅವರಲ್ಲಿ ತಮ್ಮದೇ ಹೊಸ ಐಡೆಂಟಿಟಿ ರೂಪಿಸಿಕೊಳ್ಳುವ ತವಕವೂ ಇದೆ. ಆ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಮೊದಲ ಸಿನಿಮಾದಲ್ಲಿಯೇ ಕಾಣುವುದಾಗಿ ಹೇಳುತ್ತಾರೆ.

“ನನಗೆ ಸ್ಪಷ್ಟತೆ ಇದೆ. ದೊಡ್ಡ ದೊಡ್ಡ ಡೈಲಾಗ್‌ಗಳಿಗೆ ನನ್ನ ದೊಡ್ಡಪ್ಪ ಸಾಯಿಕುಮಾರ್ ಹೆಸರುವಾಸಿ. ಅಪ್ಪನ ಡೈಲಾಗ್‌ಗಳಂತೂ ಫೇಮಸ್. ಅವರ ಬಾಡಿ ಲಾಂಗ್ವೇಜ್ ಕೂಡ ಜನಪ್ರಿಯ. ಹೀಗಾಗಿ ಮೊದಲೇ